# ಕರ್ನಾಟಕ ಲೋಕಾಯುಕ್ತ

ಕಂಪ್ಲೆಂಟ್/ಉಪಲೋಕ್/ಬಿಜಿಎಂ/3142–2021
ಮಂಡನಾಧಿಕಾರಿಗಳ ಶಾಖೆ

ಬಹುಮಹಡಿಗಳ ಕಟ್ಟಡ
ಡಾ. ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 13/09/2022.

## ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3) ರನ್ವಯ ಶಿಫಾರಸ್ಸು ವರದಿ

**ವಿಷಯ: ಶ್ರೀ ಶೇಖಪ್ಪ ಅಂಕಲಕಿ, ಯೋಜನಾ ಸಹಾಯಕರು, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯ ಕಛೇರಿ, ಧಾರವಾಡ, – ಆದ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು, ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧ ನಡವಳಿ ಕುರಿತು.**

----

ಪೊಲೀಸ್ ಇನ್ಸ್‌ಪೆಕ್ಟರ್, ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆ, ಧಾರವಾಡ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ). ಇವರು ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ, ಸದರಿ ವರದಿಯಲ್ಲಿ **ಶ್ರೀ ಶೇಖಪ್ಪ ಅಂಕಲಕಿ, ಯೋಜನಾ ಸಹಾಯಕರು, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯ ಕಛೇರಿ, ಧಾರವಾಡ,** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ, **ಶ್ರೀ ಬಿ.ಎ.ಜಾಧವ, ಬಿನ್ ಎ.ಜಾಧವ, ಪೊಲೀಸ್ ಇನ್ಸ್‌ಪೆಕ್ಟರ್–2, ಎಸಿಬಿ ಪೊಲೀಸ್ ಠಾಣೆ, ಧಾರವಾಡ ಜಿಲ್ಲೆ** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರಿಗೆ ಬಂದ ಖಚಿತ ಮಾಹಿತಿಯ ಮೇರೆಗೆ ಎದುರುದಾರರು ಕೆಲಸ ಮಾಡುವ ಕಛೇರಿಯನ್ನು ಶೋಧನೆ ಮಾಡಿ, ನಂತರ ಸರ್ಕಾರಿ ತರ್ಫೆ ನೀಡಿದ ದೂರಿನಂತೆ, ನೀವು ಡಾ: ಪಿ.ವಿ.ದತ್ತ, ಕಿವುಡ ಮಕ್ಕಳ ಶಾಳೆ, ಭವಾನಿನಗರ, ಹುಬ್ಬಳ್ಳಿಯಲ್ಲಿ ಕೆಲಸ ಮಾಡುವ ಬೋಧಕರು/ಬೋಧಕೇತರ ಸಿಬ್ಬಂದಿಗಳಿಗೆ 6ನೇ ವೇತನ ಆಯೋಗದಂತೆ ಸಂಬಳ ನಿಗದಿ ಮಾಡಿಕೊಡಲು ಪ್ರತಿಯೊಬ್ಬರಿಂದ 10% ನಂತೆ ಲಂಚದ ಹಣಕ್ಕಾಗಿ ಬೇಡಿಕೆ ಇಟ್ಟು, ಸದರಿ ಹಣವನ್ನು ಎದುರುದಾರರು ಪಡೆಯುವ ಮುನ್ನವೇ ಶೋಧನೆ ಮಾಡಿ ಹಣವನ್ನು ವಶಪಡಿಸಿಕೊಂಡಿದ್ದು, ದೂರುದಾರರು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಪಡೆದು, ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984, ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ತನಿಖೆಯನ್ನು ಕೈಗೊಂಡಿರುತ್ತಾರೆ.

2. **ಪ್ರಕರಣದ ಸಂಕ್ಷಿಪ್ತ ಮಾಹಿತಿ :** ದೂರುದಾರರು / ಪಿಐ–2 ತಮ್ಮ ದೂರಿನಲ್ಲಿ, ಪೊಲೀಸ್ ಉಪಾಧೀಕ್ಷಕರು, ಎಸಿಬಿ, ಧಾರವಾಡ, ಇವರು ತಮ್ಮ ಜ್ಞಾಪನದಲ್ಲಿ **"ಧಾರವಾಡದ ಮಿನಿ ವಿಧಾನಸೌಧದಲ್ಲಿ ಇರುವ ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯ ಕಛೇರಿಯಲ್ಲಿ ಒಂದು**

**ಶಾಲೆಯ ಶಿಕ್ಷಕರ ಸಂಬಳ ಮತ್ತು ಅರಿಯರ್ಸ್‌ನ ಹಣದ ಚೆಕ್‌ಗಾಗಿ ಸದರಿ ಕಛೇರಿಯ ಅಧಿಕಾರಿಗಳು ಲಂಚದ ಹಣವನ್ನು ತೆಗೆದುಕೊಳ್ಳುತ್ತಿದ್ದಾರೆಂದು ಬಾತ್ಮಿ ಬಂದ ಪ್ರಕಾರ"** ದಿ: 03/04/2019ರಂದು ದೂರುದಾರರು / ಪಿಐ-2, ಪಂಚರನ್ನು, ಸಿಬ್ಬಂದಿ ಇವರನ್ನು ಕರೆದುಕೊಂಡು, ಇಲಾಖಾ ವಾಹನದಲ್ಲಿ ಮಿನಿ ವಿಧಾನಸೌದ ಕಾಂಪೌಂಡ್ ಹತ್ತಿರ ವಾಹನವನ್ನು ನಿಲ್ಲಿಸಿ, ಮಾಹಿತಿ ಬಂದ ಇಲಾಖೆ ಕಛೇರಿ ಹತ್ತಿರ ಕಾಯುತ್ತಿರುವಾಗ, ಭಾತ್ಮಿಗೆ ಹೋಲುವಂತ ಒಬ್ಬ ವ್ಯಕ್ತಿ 12.30 ಗಂಟೆಗೆ ವಿಕಲಚೇತನರ ಕಛೇರಿ ಒಳಗೆ ಹೋದನು. ಮ: 1.45 ಗಂಟೆಗೆ ಈ ಮೊದಲು ಒಳಗೆ ಹೋದ ವ್ಯಕ್ತಿ, ಇನ್ನಿಬ್ಬರ ಜೊತೆ ಹೊರಗಡೆ ಬಂದಾಗ, ದೂರುದಾರರು ಸಿಬ್ಬಂಧಿ ಮತ್ತು ಪಂಚರು ಅವರ ಬಳಿ ಹೋಗಿ, ತಮ್ಮನ್ನು ಪರಿಚಯ ಮಾಡಿಕೊಂಡು, ದೂರುದಾರರು / ಪಿಐ-2, ಅವರುಗಳನ್ನು ಕರೆದುಕೊಂಡು ವಿಕಲಚೇತನ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯ ಕಛೇರಿಗೆ ಹೋಗಿ ಅವರುಗಳ ಹೆಸರುಗಳನ್ನು ಕೇಳಲಾಗಿ 1) ವೀರಬಸಪ್ಪ ಕೊಟ್ಟೂರು ಶೆಟ್ಟರ, ಆಡಳಿತ ಅಧಿಕಾರಿ, ಕಿವುಡ ಮಕ್ಕಳ ಶಾಲೆ, ಭವಾನಿ ನಗರ, ಹುಬ್ಬಳಿ, 2) ಶೇಖಪ್ಪ ಅಂಕಲಗಿ, ಬಿನ್ ಶ್ರೀ ಕಲ್ಲಪ್ಪ, ಯೋಜನಾ ಸಹಾಯಕರು, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯ ಕಛೇರಿ ಧಾರವಾಡ, (ಎದುರುದಾರರು), 3) ಬಿಂದುಮಾಧವ ಕುಲಕರ್ಣಿ, ಬೆರಳಚ್ಚುಗಾರರು ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ಎಂದು ತಿಳಿಸಿರುತ್ತಾರೆ. ನಂತರ, ದೂರುದಾರರು / ಪಿಐ-2, ತಮ್ಮ ಮೇಲಾಧಿಕಾರಿಗಳಿಂದ ಬಂದ ಮಾಹಿತಿಯನ್ನು ಸದರಿಯವರುಗಳಿಗೆ ತಿಳಿಸಿ, ಅವರುಗಳ ಅಂಗಶೋಧನೆಯನ್ನು ಮಾಡಿದಾಗ, ಎದುರುದಾರರ ಬಳಿ 100/- ರೂ. ಹಾಗೂ ಬಿಂದುಮಾಧವ ಕುಲಕರ್ಣಿ, ಬೆರಳಚ್ಚುಗಾರರು, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ಅವರ ಬಳಿ 1000/- ರೂ ದೊರಕಿದ್ದು, ಅದನ್ನು ಅವರಿಗೆ ಮರಳಿ ನೀಡಿರುತ್ತಾರೆ. ನಂತರ, ದೂರುದಾರರು / ಪಿಐ-2, ಶ್ರೀ ರವರು ಶ್ರೀ ವೀರಬಸಪ್ಪ ಕೊಟ್ಟೂರಶೆಟ್ಟರ, ಆಡಳಿತಾಧಿಕಾರಿ ಕಿವುಡ ಮಕ್ಕಳ ಶಾಲೆ ಭವಾನಿನಗರ ಹುಬ್ಬಳ್ಳಿ, ಇವರನ್ನು ಶೋಧಿಸಲಾಗಿ, ಅವರ ಬಳಿ ಕೈಚೀಲವಿದ್ದು ಒಂದು ಹಸಿರು ಬಣ್ಣದ ಪ್ಲಾಸ್ಟೀಕ್ ಫೈಲ್ ಇದ್ದು, ಅದರಲ್ಲಿ ಕೆಲವೊಂದು ಪೇಪರ್‌ಗಳಿದ್ದು ಹಾಗೂ ಚಾಕಲೇಟ್ ಕಲರ್ ಪರ್ಸ ಇದ್ದು, ಅದರಲ್ಲಿ 83,660-00 ನಗದು ಹಣ ಹಾಗೂ ಎಸ್.ಬಿ.ಐ ಕಾಲೇಜ್ ರೋಡ್, ಧಾರವಾಡದ 12,72,180-00 ನಮೂದಿಸಿದ ಒಂದು ಚೆಕ್, ಕಾರ್ಯದರ್ಶಿ ಡಾ: ಪಿ.ವಿ.ದತ್ತಿ ಕಿವುಡ ಮಕ್ಕಳ ಶಾಲೆ ಹುಬ್ಬಳ್ಳಿ ರವರಿಗೆ, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕರಿಗಳೂ ಬರೆದ ಪತ್ರ ಹಾಗೂ ಎರಡು ಹಾಳೆಗಳು ದೊರೆತಿದ್ದವು. ಅವುಗಳಲ್ಲಿ 9,07,259-00 ರೂಪಾಯಿಗೆ ಶೇ: 10% ರಂತೆ ಲೆಕ್ಕ ಮಾಡಿದ ಬಗ್ಗೆ ಮತ್ತು ಶಾರ್ಟ್ ಫಾರ್ಮ್‌ನಲ್ಲಿ ಹೆಸರುಗಳನ್ನು ನಮೂದಿಸಿ, ಅದರ ಮುಂದೆ ಪೇಡ್ ಎಂದು ಗುರುತಿಸಿದ ಬಗ್ಗೆ ನಮೂದಾಗಿರುತ್ತದೆ. ದೂರುದಾರರು / ಪಿಐ-2, ಇದರ ಬಗ್ಗೆ ಶ್ರೀ ವೀರಬಸಪ್ಪ ರವರನ್ನು ವಿಚಾರಿಸಿದಾಗ, ತಾನು ಕೆಲಸ ಮಾಡುವ ಡಾ: ಪಿ.ವಿ.ದತ್ತಿ, ಕಿವುಡ ಮಕ್ಕಳ ಶಾಲೆಯ ಶಿಕ್ಷಕರ ಮತ್ತು ಭೋಧಕೇತರ ಸಿಬ್ಬಂದಿಗಳ 6ನೇ ವೇತನ ಪರಿಷ್ಕರಣೆ ಅರಿಯರ್ಸ್ ಬಿಲ್ ಆಗಿರಲಿಲ್ಲ. ಸದರಿ ಬಿಲ್ ಮಾಡಿ ಕೊಡಲು, ಶೇಕಡ 10% ರಷ್ಟು ಲಂಚದ ಹಣಕ್ಕಾಗಿ ಬೇಡಿಕೆಯನ್ನು, ಸದರಿ ಕಛೇರಿಯಲ್ಲಿ ಕೆಲಸ ಮಾಡುವ ಯೋಜನಾ ಸಹಾಯಕರಾದ ಶ್ರೀ ಎಸ್.ಕೆ.ಅಂಕಲಕಿ (ಎದುರುದಾರರು) ರವರು ಇಟ್ಟಿರುತ್ತಾರೆ ಹಾಗೂ ಆ ಹಣವನ್ನು ಶಾಲೆಯ ಎಲ್ಲ ಬೋಧಕ ಮತ್ತು ಭೋದಕೇತರ ಸಿಬ್ಬಂದಿಯವರಿಂದ ಸಂಗ್ರಹಿಸಿ, ತನ್ನ ಬಳಿ ಇಟ್ಟುಕೊಂಡಿದ್ದು, ಅದೇ ಹಣವನ್ನು ಎದುರುದಾರರಿಗೆ ಕೊಡಲು ಬಂದಿರುತ್ತೇನೆ ಎಂದು ತಿಳಿಸಿರುತ್ತಾರೆ

ಹಾಗೂ ಈ ಬಗ್ಗೆ ತಮ್ಮ ಸ್ವ ಲಿಖಿತ ಸಮಜಾಯಿಷಿಯನ್ನು ನೀಡಿದ್ದು ಹಾಗೂ ಟೀ ಕುಡಿಯಲು ಹೋಗುತ್ತಿದ್ದು, ನಂತರ ಹಣವನ್ನು ಕೊಡುವವನಿದ್ದೆ ಎಂದು ತಿಳಿಸಿರುತ್ತಾರೆ.

3. ಆದ್ದರಿಂದ ಸದರಿ ಹಣವು ಡಾ: ಪಿ.ವಿ.ದತ್ತಿ, ಕಿವುಡ ಮಕ್ಕಳ ಶಾಲೆಯ ಶಿಕ್ಷಕರು ಮತ್ತು ಭೋದಕೇತರ ಸಿಬ್ಬಂದಿಗಳ 6ನೇ ವೇತನ ಆಯೋಗದ ಪರಿಷ್ಕರಣೆ ಅರಿಯರ್ಸ್ ಬಿಲ್ ಮಾಡಲು ಲಂಚವಾಗಿ, ಎದುರುದಾರರಿಗೆ ನೀಡಲು ತಂದಿದ್ದ ಅಕ್ರಮ ಹಣ ಅಂತ ಕಂಡು ಬಂದಿದ್ದರಿಂದ, ಅದನ್ನು ವಶಪಡಿಸಿಕೊಂಡು ಹಾಗೂ ಸದರಿ ಅರಿಯರ್ಸ್ ಬಿಲ್ ಮತ್ತು ವೇತನದ ಚೆಕ್ಕಿನ ದೃಢಿಕೃತ ಜೆರಾಕ್ಸ್ ಪ್ರತಿಯನ್ನು ಹಾಗೂ ಇನ್ನಿತರೆ ದಾಖಲೆಗಳನ್ನು ಮುಂದಿನ ತನಿಖೆಗೆ ತೆಗೆದುಕೊಂಡು, ಸ್ಥಳದಲ್ಲಿ ಪಂಚರ ಸಮಕ್ಷಮ ಹಾಗೂ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಯವರ ಸಮಕ್ಷಮ ಮದ್ಯಾಹ್ನ 02-15 ರಿಂದ 05-45 ರವರೆಗೆ ಸ್ಥಳದಲ್ಲಿಯೇ ಪಂಚನಾಮೆಯನ್ನು ಮಾಡಿ, ನಂತರ ಠಾಣೆಗೆ ಬಂದು, ಡಾ: ಪಿ.ವಿ.ಜತ್ತಿ ಕಿವುಡ ಮಕ್ಕಳ ಶಾಲೆ ಭವಾನಿನಗರ ಹುಬ್ಬಳ್ಳಿಯ ಭೋದಕ ಮತ್ತು ಭೋದಕೇತರ ಸಿಬ್ಬಂದಿಗಳ 6ನೇ ವೇತನ ಆಯೋಗದ ಪರಿಷ್ಕರಣೆ ಅರಿಯರ್ಸ್ ಬಿಲ್ ಹಾಗೂ ಮಾರ್ಚ್ 2019 ರ ವೇತನ ಬಿಲ್ ಚೆಕ್ ನೀಡಲು ಶೇ: 10% ಲಂಚದ ಹಣ ಬೇಡಿಕೆ ಇಟ್ಟ ಎದುರುದಾರರ ಮೇಲೆ ಮುಂದಿನ ಕಾನೂನು ಕ್ರಮ ಜರುಗಿಸಲು ದೂರನ್ನು ನೀಡಿದ್ದು, ಹಾಗು ದೂರಿನ ಜೊತೆ ಮೂಲ ಪಂಚನಾಮೆ ಹಾಗೂ ವಶಪಡಿಸಿಕೊಂಡ ದಾಖಲಾತಿಗಳನ್ನು ಹಾಗೂ ನಗದನ್ನು ಹಾಜರುಪಡಿಸಿರುತ್ತಾರೆ. ಸದರಿ ದೂರಿನ ಮೇರೆಗೆ ಪೊಲೀಸ್ ಉಪಾಧೀಕ್ಷಕರು, ಎಸಿಬಿ ಪೊಲೀಸ್ ಠಾಣೆ, ಹುಬ್ಬಳಿ- ಧಾರವಾಡ ನಗರ, ಇವರು ಮೊ.ಸಂ: 5/2019, ಲಂಚ ಪ್ರತಿಬಂಧಕ ಕಾಯ್ದೆ 1988, ಕಲಂ 7ರ ಅನ್ವಯ ಪ್ರಕರಣವನ್ನು ದಾಖಲು ಮಾಡಿಕೊಂಡಿರುತ್ತಾರೆ.

4. ನಂತರ, ಶೋಧನಾಧಿಕಾರಿಯವರು, ಡಾ: ಪಿ.ವಿ.ದತ್ತಿ, ಕಿವುಡ ಮಕ್ಕಳ ಶಾಲೆಯ ಆಡಳಿತಾಧಿಕಾರಿಯಾದ ಶ್ರೀ ವೀರಬಸಪ್ಪರವರಿಂದ ಸಮಜಾಯಿಷಿಯನ್ನು ಕೇಳಲಾಗಿ, ಅವರು ತನ್ನ ಸಮಜಾಯಿಷಿಯಲ್ಲಿ ... **"ನಾನು ಡಾ: ಪಿ.ವಿ.ದತ್ತಿ ರೋಟರಿ ಕಿವುಡ ಮಕ್ಕಳ ಶಾಲೆ, ಭವಾನಿನಗರ, ಹುಬ್ಬಳ್ಳಿ ಇಲ್ಲಿ ಆಡಳಿತಾಧಿಕಾರಿಗಳು ಅಂತಾ ಹುದ್ದೆ ನಿರ್ವಹಣೆ: 2014 ರಿಂದ ಇವತ್ತಿನವರೆಗೆ, ಕರ್ತವ್ಯಗಳು: ಶಾಲೆಯ ಆಡಳಿತ ನಿರ್ವಹಣೆ, ವರ್ಗಗಳ ಸಂದರ್ಶನ, ಪಾಠದ ಟಿಪ್ಪಣಿಗೆ ಸಹಿಯನ್ನು ಮಾಡುವುದು, ಧಾರವಾಢದ ಕಾರ್ಯಾಲಯಕ್ಕೆ ಬಂದು ವೇತನ ಬಿಲ್ಲುಗಳನ್ನು ನೀಡುವುದು, ಮತ್ತು ವೇತನಕ್ಕೆ ಸಂಬಂಧಪಟ್ಟ ಚೆಕನ್ನು ಪಡೆಯುವುದು, ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಪ್ರಯತ್ನಿಸುವುದು. ದಿ: 03/04/2019 ರಂದು ಧಾರವಾಡ ಇಲಾಖೆಗೆ ಬಂದು ಆರನೆಯ ವೇತನ ಆಯೋಗದ ವೇತನ ಬಿಲ್ಲು ಹಾಗೂ ಮಾರ್ಚ್ ತಿಂಗಳ ವೇತನದ ಚೆಕ್ಕನ್ನು ಪಡೆಯಲು ಇಂದು ಬಂದಿದ್ದೇನು. ದಿ: 02/04/2019 ರಂದು ಎಲ್ಲ ಸಿಬ್ಬಂದಿ ವರ್ಗದವರು ಸೇರಿ ವೇತನದ ಚೆಕ್ಕನ್ನು ಪಡೆಯಲು ಶ್ರೀಯುತ ಅಂಕಲಕಿ ಯವರು ಹಣವನ್ನು ಕೇಳುವುದರಿಂದ, ಎಲ್ಲಾ ಶಿಕ್ಷಕರು ಸೇರಿ ಅವರಿಗೆ ಹಣವನ್ನು ನೀಡುವ ಸಲುವಾಗಿ ನಮ್ಮ ವೇತನದ ಶೇಕಡ 10 ರಷ್ಟು ಹಣವನ್ನು ಸಂಗ್ರಹಿಸಿದ್ದೇವೆ ಅಂತಾ ಶ್ರೀ ವಿ.ಕೆ.ಜೋಷಿ ಹಾಗೂ ಎ.ಡಿ. ಅನಂತಪುರ ಶಿಕ್ಷಕಿಯರು ಬಂದು ಈ ಮೂಲಕ ಲಿಸ್ಟನ್ನು ಮಾಡಿ ಅದರಂತೆ ಹಣವನ್ನು ಅವರಿಂದ ಪಡೆದು ದಿ: 03/04/2019 ರಂದು ಹೋಗಿ ಆ ಹಣವನ್ನು ನೀಡಿ ಚೆಕ್ಕನ್ನು ಪಡೆಯಲು ಹೇಳಿದರು. ಅದೇ ಪ್ರಕಾರ ಶ್ರೀಮತಿ ಚಿನ್ನದಕ್ಕಿ ಯವರನ್ನು ಹೊರತುಪಡಿಸಿ ಉಳಿದವರಿಂದ ಸಂಗ್ರಹಿತವಾದ ಹಣವನ್ನು ಎಂದು ನೀಡಲು ಬಂದಿದ್ದೆನು. ಇಂದು ಶ್ರೀಯುತ ಆರ್.ಡಿ.ರೇಮಿಡಿ**

ಹಾಗೂ ಶ್ರೀಯುತ ಸಿ.ಡಿ. ಅನಂತಪುರ ಇವರು ರೂಪಾಯಿ 10579-00 ಹಾಗೂ ಶ್ರೀಮತಿ ಸಿ.ಡಿ. ಅನಂತಪುರ ಇವರು 11059-00 ನ್ನು ನೀಡಿದ್ದಾರೆ. ಇದೆಲ್ಲಾ ಹಣವನ್ನು ಸಂಗ್ರಹಿಸಿಕೊಂಡು ಇಂದು ಬಂದಿದ್ದು ನಿಜವಿದೆ. ನನ್ನ ಬಳಿ ಇದ್ದ ಹಣ ನಿನ್ನೆ ಸಂಗ್ರಹಿಸಿಟ್ಟ 52087+21638 ಒಟ್ಟು 83725-00 ಆ ಹಣವನ್ನು ಶಿಕ್ಷಕರಿಂದ ಸಂಗ್ರಹಿಸಿದ್ದೆ. ನಾನು ಇಂದು ಕಾರ್ಯಾಲಯಕ್ಕೆ ಬಂದು ಶ್ರೀಯುತ ಅಂಕಲಕಿಯವರಿಂದ ಚೆಕನ್ನು ಪಡೆದಿದ್ದೇನೆ ಅದಾದ ನಂತರ ಚಹ ಕುಡಿಯಲು ಹೊರಟಾಗ ಬಂದು ನನ್ನನ್ನು ತಡೆದು ಎ.ಸಿ.ಬಿ. ಯವರು ಎಂದು ಹೇಳಿ ನನ್ನಿಂದ ನಿಜಾಂಶವನ್ನು ಪಡೆದಿದ್ದಾರೆ. ನಿಜವಾಗಿ ಹೇಳಬೇಕೆಂದರೆ ನಾವು ಚಹಾ ಕುಡಿದು ಬಂದ ನಂತರ ಎದುರುದಾರರಿಗೆ ಹಣವನ್ನು ಹಸ್ತಾಂತರ ಮಾಡುವವನಿದ್ದೇನು" ಎಂದು ಸಮಜಾಯಿಷಿ ನೀಡಿರುತ್ತಾರೆ.

5. ನಂತರ, ಶೋಧನಾಧಿಕಾರಿ ಇವರು ಎದುರುದಾರರ ಸಮಜಾಯಿಷಿ ಕೇಳಲಾಗಿ "ನಾನು ಮೇಲ್ಕಂಡ ಕಛೇರಿಯಲ್ಲಿ ಈಗ ಸುಮಾರು 7 ವರ್ಷದಿಂದ ಕೆಲಸ ಮಾಡುತ್ತಿದ್ದು ನನ್ನ ಕೆಲಸ ಸಂಬಳ ಬಿಲ್ಲುಗಳನ್ನು ತಯಾರಿಸುವುದು, ಅಂಗವಿಕಲರ ವಿದ್ಯಾರ್ಥಿ ಗೃಹಗಳಿಗೆ ಶಿಷ್ಯವೇತನ ಇ-ಪೇಮೆಂಟ್ ಮೂಲಕ ಸಂದಾಯ ಮಾಡುವುದು, ಕಛೇರಿಯ ಡಿ.ಸಿ. ಬಿಲ್ಲುಗಳನ್ನು ತಯಾರಿಸುವುದು, ಇತ್ಯಾದಿ. ನಮ್ಮ ಇಲಾಖೆಯ ಜಿಲ್ಲೆಗೊಂದು ಕಛೇರಿ ಇದ್ದು ನಮ್ಮ ವ್ಯಾಪ್ತಿಯಲ್ಲಿ ಧಾರವಾಡದಲ್ಲಿ ಡಾ: ಶೈನಾಜ ಬುದ್ಧಿಮಾಂದ ಮಕ್ಕಳ ಶಾಲೆ, ಹುಬ್ಬಳ್ಳಿಯ ಕಿವುಡ ಮಕ್ಕಳ ಶಾಲೆ, ನಮ್ಮ ವ್ಯಾಪ್ತಿಯಲ್ಲಿ ಬರುತ್ತವೆ. ಈ ದಿನ ರೋಟರಿ ಕಿವುಡ ಮಕ್ಕಳ ಶಾಲೆಯ ಅಡ್ಮಿನಿಸ್ಟ್ರೇರಾದ ಕೊಟ್ಟರಶೆಟ್ಟರ ಬಂದರು. ಸಿಬ್ಬಂದಿಯ ಮಾರ್ಚ್ 2019 ತಿಂಗಳ ವೇತನ ಹಾಗೂ ಆರನೇ ವೇತನದ ಚೆಕ್ಕನ್ನು ನೀಡಿ ಎಂದು ಕೇಳಿದರು. ಅವರಿಗೆ ನಾನು ಚೆಕ್ಕನ್ನು ನೀಡಿ ಅವರಿಂದ ರುಜುವನ್ನು ಪಡೆದೆನು. ಅವರು ಊಟದ ಸಮಯ ಚಹಾವನ್ನು ಕುಡಿದು ಬರೋಣಾ ಎಂದು ಹೇಳಿದರು. ಆಗ ನಾನು ನನ್ನ ಕಛೇರಿಯ ಬೆರಳಚ್ಚುಗಾರ ಬಿ.ಪಿ. ಕುಲಕರ್ಣಿ ಇವರನ್ನು ಕರೆದುಕೊಂಡು ಹೋಗುವಾಗ ಎ.ಸಿ.ಬಿ ಕಛೇರಿಯವರು ನಮ್ಮನ್ನು ಚವಕಾಶಿ ಮಾಡಲಾಗಿ ನಾನು ಯಾವುದೇ ರೀತಿಯ ಮಾತುಗಳನ್ನು ಆಡಿಲ್ಲಾ ಎಂದು ಹಾಗೂ ಈ ವಿಷಯ ನನಗೆ ಗೊತ್ತಿರುವುದಿಲ್ಲವೆಂದು ತಮ್ಮ ಸಮಜಾಯಿಷಿಯನ್ನು ನೀಡಿರುತ್ತಾರೆ. ನಂತರ, ತನಿಖಾಧಿಕಾರಿಯು ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ ಹಾಗೂ ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ. ಈ ಸಂಬಂಧವಾಗಿ ಶೋಧನಾಧಿಕಾರಿ ದಿ: 03/04/2019 ರಂದು ಮದ್ಯಾಹ್ನ 02-15 ರಿಂದ ಸ: 05-45 ರವರೆಗೆ ಸ್ಥಳದಲ್ಲಿಯೇ ಶೋಧನಾ ಪಂಚನಾಮೆಯನ್ನು ಮಾಡಿರುತ್ತಾರೆ.

6. ದಿನಾಂಕ: 01/04/2021 ರಂದು ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ / ವಿವರಣೆಯನ್ನು ಕೇಳಲಾಗಿರುತ್ತದೆ. ಎದುರುದಾರರಿಗೆ ದಿನಾಂಕ: 16/04/2022 ರಂದು ಪರಿವೀಕ್ಷಣಾ ಟಿಪ್ಪಣಿ ಜಾರಿಯಾಗಿರುತ್ತದೆ. ಆದರೂ ಸಹ ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ ಸಲ್ಲಿಸಿರುವುದಿಲ್ಲ. ಅಲ್ಲದೆ, ಎದುರುದಾರರಿಗೆ ದೂರವಾಣಿ ಮೂಲಕ ಸಂಪರ್ಕಿಸಲು ಪ್ರಯತ್ನಿಸಿದಾಗ, ಅವರ ಮೊಬೈಲ್ ಸ್ವಿಚ್ ಆಫ್ ಆಗಿರುತ್ತದೆ. ಪರಿವೀಕ್ಷಣಾ ಟಿಪ್ಪಣಿ ಜಾರಿಯಾಗಿ, 02 ತಿಂಗಳು ಗತಿಸಿದರೂ ಸಹ ಎದುರುದಾರರು ತಮ್ಮ ವಿವರಣೆಯನ್ನು ಸಲ್ಲಿಸಿರುವುದಿಲ್ಲ ಹಾಗೂ ಯಾವುದೇ ಸಕಾರಣವನ್ನು ನೀಡಿರುವುದಿಲ್ಲ. ಹಾಗಾಗಿ ಮಾನ್ಯರ ಆದೇಶದ ಮೇರೆಗೆ, ಎದುರುದಾರರ ಸಮಜಾಯಿಷಿ ಏನು ಇಲ್ಲವೆಂದು ಪರಿಗಣಿಸಲಾಗಿರುತ್ತದೆ. ಹಾಗಾಗಿ ಎದುರುದಾರರ ವಿರುದ್ಧ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು

ಮಾಡದೇ ಇರಲು ಸೂಕ್ತ ಕಾರಣಗಳು ಕಂಡುಬಂದಿರುವುದಿಲ್ಲ. ಸಾಕ್ಷಿದಾರರ ಹೇಳಿಕೆಗಳು ದೂರು ಅರ್ಜಿ ಹಾಗೂ ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳಿಂದ ಮೇಲ್ನೋಟಕ್ಕೆ ದುರ್ನಡತೆ ಕಂಡು ಬರುತ್ತದೆ.

7. ಈ ಮೇಲ್ಕಂಡ ಅಂಶಗಳನ್ನು ಮತ್ತು ತನಿಖಾ ವರದಿಯ ವಿವರಗಳನ್ನು ಪರಿಶೀಲಿಸಲಾಗಿ, ಎದುರುದಾರರು ತಮ್ಮ ಕರ್ತವ್ಯದಲ್ಲಿ ಸಂಪೂರ್ಣ ನಿಷ್ಠೆಯನ್ನು ಪಾಲಿಸದೆ, ಕರ್ತವ್ಯ ಶ್ರದ್ಧೆಯನ್ನು ಹೊಂದಿರದೆ, ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಭ್ರಷ್ಟಾಚಾರಕ್ಕೆ ಪ್ರಯತ್ನಿಸಿದ್ದು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ (ಪ್ರಸುತ್ತ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 2021) ನಿಯಮ 3(1) (i) ರಿಂದ (iii) ರ ಉಲ್ಲಂಘನೆಗಾಗಿ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈ ವರದಿಯ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 14(ಎ) ರಡಿ ಉಪಲೋಕಾಯುಕ್ತರಿಗೆ ವಹಿಸಬೇಕೆಂದು ಕೋರಿದೆ.

8. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

13/9/22

(ನ್ಯಾಯಾಮೂರ್ತಿ ಕೆ.ಎನ್.ಫಣೀಂದ್ರ)
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು